# ಕಲಾಶ್ರೀ ಪ್ರಶಸ್ತಿ–೨೦೧೯ ಪ್ರದಾನ ಸಮಾರಂಭ



ಧಾರವಾಡ : ಸಂಗೀತ ಎಂಬುದು ಒಂದು ಮಹಾತಪಸ್ಸು, ಅದನ್ನು ತ್ರಿಕರಣ ಶುದ್ಧಿಯಿಂದ ಸಮರ್ಥ ಗುರುವಿನ ಕೃಪಾಶೀರ್ವಾದದಿಂದ ಸಾಧನೆ ಮಾಡಲು ಸಾಧ್ಯ ಎಂದು ಹುಬ್ಬಳ್ಳಿ ಸಿದ್ಧಾರೂಢ ಮಠದ ಟ್ರಸ್ಟ್ ಕಮಿಟಿಯ ಚೇರಮನ್ ಹಾಗೂ ನಿವೃತ್ತ ಪೊಲೀಸ ಅಧಿಕಾರಿ ಡಿ.ಡಿ. ಮಾಳಗಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ಪಂಡಿತ ಯಲ್ಲಪ್ಪ ಗ. ಅಮರಗೋಳಕರ ದತ್ತಿ ಅಂಗವಾಗಿ ದಿನಾಂಕ ೨೯–೫–೨೦೧೯ ರಂದು ಆಯೋಜಿಸಿದ್ದ 'ಕಲಾಶ್ರೀ ಪ್ರಶಸ್ತಿ–೨೦೧೯' ಪ್ರಧಾನ ಸಮಾರಂಭದಲ್ಲಿ, ಮುಖ್ಯ ಅತಿಥಿಗಳಾಗಿ ಆಗಮಿಸಿ, ಮಾತನಾಡಿ, ಪಂಡಿತ ಯಲ್ಲಪ್ಪ ಗ. ಅಮರಗೋಳಕರ ಅವರು ಸಕಲ ಸಂಗೀತ ಕಲಾ ವಲ್ಲಭರು. ಓರ್ವ ಶಿಕ್ಷಕರಾಗಿದ್ದ ಅವರು ಪಂಡಿತ ಪುಟ್ಟರಾಜ ಗವಾಯಿಗಳಲ್ಲಿ ಶಿಷ್ಯತ್ವ ಪಡೆದು ಸಂಗೀತಾಭ್ಯಾಸ ಮಾಡಿದರು. ಶಹನಾಯಿ ವಾದನದಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಅವರು ಬನಾರಸ್‌ಗೆ ತೆರಳಿ ಶಿಷ್ಯತ್ವ ಸ್ವೀಕರಿಸಿದರು. "ಗುರುಸೇವೆ ಮಹಾಸೇವೆ" ಎಂಬ ತತ್ವದಂತೆ ಪಂ. ಬಿಸ್ಮಿಲ್ಲಾಖಾನರ ಸೇವೆ ಮಾಡಿ, ಶ್ರದ್ಧೆ, ಭಕ್ತಿಯಿಂದ ಶಹನಾಯಿಯಲ್ಲಿ ಪಾಂಡಿತ್ಯ ಪಡೆದರು.

'ಕರ್ನಾಟಕದ ಬಿಸ್ಮಿಲ್ಲಾಖಾನ್' ಎಂದು ಖ್ಯಾತನಾಮರಾದ ಅವರು ದಕ್ಷಿಣ ಭಾರತದ ಏಕೈಕ ಶಹನಾಯಿ ವಾದಕ ಸಾಧಕರಾದದ್ದು ದಾಖಲೆ. ಜೀವನದಲ್ಲಿ ಎದುರಾದ ಎಷ್ಟೋ ಕಷ್ಟಗಳಿಗೆ ಎದೆಗುಂದದೆ ಸಮರ್ಥವಾಗಿ ಎದುರಿಸಿ ಪಾಂಡಿತ್ಯ ಪಡೆದರು. ಅಪಾರ ಶಿಷ್ಯ ಬಳಗ ಹೊಂದಿದ ಅವರಿಗೆ ಜೀವಿತಾವಧಿಯಲ್ಲಿ ಸಿಗಬೇಕಾದ ಗೌರವ ಸಿಗದಿರುವುದು, ಸರಕಾರ ಅಂತಹ ಸಾಧಕರನ್ನು ನಿರ್ಲಕ್ಷಿಸಿದ್ದು ವಿಷಾದ ಎಂದರು.

ಅಧ್ಯಕ್ಷತೆ ವಹಿಸಿದ್ದ ಕ.ವಿ.ವಿ.ಯ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಕೆ.ಎಸ್. ಕಾಡದೇವರಮಠ ಮಾತನಾಡಿ, ಪಂಡಿತ ಅಮರಗೋಳಕರ ಅವರಿಗೆ ಸಂಗೀತ ಕಲಾ ಸಾಧನೆಗೆ ಬಡತನ ಅಡ್ಡಿ ಬರಲಿಲ್ಲಾ, ಗದುಗಿನ ವೀರೇಶ್ವರ ಪುಣ್ಯಾಶ್ರಮದ ಕೃಪಾಶೀರ್ವಾದದಿಂದ ಖ್ಯಾತ ಶಹನಾಯಿವಾದಕರಾಗಲು ಸಾಧ್ಯವಾಯಿತು. ಸ್ವಾಭಿಮಾನದ ಬದುಕು ಸಾಗಿಸಿದ್ದ ಅವರು ಛಲದಿಂದ ಪಾಂಡಿತ್ಯಪೂರ್ಣರಾದರು. ಸಾಧಿಸಬೇಕೆಂಬ ಛಲದಿಂದ ಸಾಧನೆಯ ಶಿಖರ ಮುಟ್ಟಿದರು. ಅವರ ನಿರಂತರ ಪರಿಶ್ರಮವು ಸಾಧನೆಗೆ ದಾರಿಯಾಯಿತು. ತಮ್ಮ ಆರು ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಿದ್ದರಿಂದ ಅವರೂ ಸಹ ಭವಿಷ್ಯಕ್ಕೊಂದು ಭರವಸೆಯ ವ್ಯಕ್ತಿಗಳಾಗಿದ್ದಾರೆ. ಅವರ ಯಶಸ್ಸಿನ ಹಿಂದೆ ಅವರ ಪತ್ನಿ ಮಲಪ್ರಭಾರ ತ್ಯಾಗವೂ ಇದೆ ಎಂದರು.

ಕಲಾ ಪ್ರಶಸ್ತಿ ೨೦೧೯ ಸ್ವೀಕರಿಸಿದ ವಾಯಲಿನ್ ಕಲಾವಿದರಾದ ಧಾರವಾಡದ ಪಂ. ಬಿ.ಎಸ್. ಮಠ ಸನ್ಮಾನಕ್ಕೆ ಪ್ರತಿಕ್ರಿಯಿಸಿ, ಅಮರಗೋಳಕರ್ ಅವರ ಯಶಸ್ಸು ಅವರ ಜೀವಮಾನದ ಸಾಧನೆಯ ಪ್ರತೀಕ. ಯಾವ ಪುರಸ್ಕಾರಗಳು ಅವರ ಪಾಂಡಿತ್ಯಕ್ಕೆ ತಕ್ಕ ಜನಮನ್ನಣೆ ಸಿಗದಿರುವುದೇ ಸೋಜಿಗದ ವಿಷಯ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪನ್ಯಾಸಕರಾದ ವೀರಣ್ಣ ಒಡ್ಡೀನ ಸ್ವಾಗತಿಸಿದರು. ಮೇ ತಿಂಗಳ ದತ್ತಿ ಕಾರ್ಯಕ್ರಮದ ಸಂಯೋಜಕರಾದ ಶಂಕರ ಕುಂಬಿ ನಿರೂಪಿಸಿದರು. ಕೊನೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರಾದ ಎಸ್.ಬಿ. ಗಾಮನಗಟ್ಟಿ ವಂದಿಸಿದರು.

ಪಂಡಿತ ಯಲ್ಲಪ್ಪ ಅಮರಗೋಳಕರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ವೇದಿಕೆಯ ಮೇಲೆ ದತ್ತಿದಾನಿಗಳಾದ ಎಸ್.ವೈ. ಅಮರಗೋಳಕರ ಉಪಸ್ಥಿತರಿದ್ದರು. ಕುಟುಂಬದ ಪರವಾಗಿ ಶಿಕ್ಷಕಿ ಸುಜಾತಾ ಅಮರಗೋಳಕರ ಮಾತನಾಡಿದರು. ಆಕಾಶವಾಣಿ ಕಲಾವಿದೆ ಶೃತಿ ಭಟ್ ಹಾಗೂ ಬಸವರಾಜ ಭಜಂತ್ರಿ ಸುಗಮ ಸಂಗೀತ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಡಾ. ಶ್ಯಾಮಸುಂದರ ಬಿದರಕುಂದಿ, ಪಂ. ಎಂ. ವೆಂಕಟೇಶಕುಮಾರ, ಅನಿಲ ಮೇತ್ರಿ, ಅರ್ಜುನ ವಠಾರ, ಡಾ. ಉದಯಕುಮಾರ ದೇಸಾಯಿ, ಜಿ.ಬಿ.ಹೊಂಬಳ, ಬಿ.ಕೆ.ಹೊಂಗಲ್, ಎಸ್.ಜಿ. ಪಾಟೀಲ, ಮಹಾಂತೇಶ ನರೇಗಲ್ ಸೇರಿದಂತೆ ಮುಂತಾದವರಿದ್ದರು.

**ಶಂಕರ ಕುಂಬಿ**
ಕಾರ್ಯಕಾರಿ ಸಮಿತಿ ಸದಸ್ಯರು
ಮೇ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರು
ಮೊ: ೯೪೪೮೮–೦೧೧೪೧